ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 03-10-1992.

# *ಬ್ರಾಹ್ಮಣ ಎಂದರೆ ಸದಾ ಶ್ರೇಷ್ಠಭಾಗ್ಯದ ಅಧಿಕಾರಿ*

(ब्राहमण अर्थात् सदा श्रेष्ठ भाग्य के अधिकारी)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಪರಮಾತ್ಮನ ಪಾಲನೆಯಲ್ಲಿ ಪಾಲನೆ ಪಡೆಯುತ್ತಿರುವ ಆತ್ಮರೊಂದಿಗೆ ಭಾಗ್ಯವಿಧಾತ ಬಾಪ್‌ದಾದಾ ಮಾತನಾಡುತ್ತಿದ್ದಾರೆ.**

ಇಂದು ಭಾಗ್ಯವಿದಾತ ಬಾಪ್‌ದಾದಾ ತನ್ನ ಸರ್ವಮಕ್ಕಳ ಶ್ರೇಷ್ಠಭಾಗ್ಯವನ್ನು ನೋಡಿ ಹರ್ಷಿತರಾಗುತ್ತಿದ್ದಾರೆ. ಇಷ್ಟು ಶ್ರೇಷ್ಠಭಾಗ್ಯ ಮತ್ತು ಎಷ್ಟು ಸಹಜವಾಗಿ ಪ್ರಾಪ್ತಿಯಾಗಿದೆ! ಇಂತಹ ಭಾಗ್ಯವು ಇಡೀ ಕಲ್ಪದಲ್ಲಿ ಬ್ರಾಹ್ಮಣಾತ್ಮರಾದ ತಮ್ಮ ಹೊರತು ಮತ್ತಾರಿಗೂ ಪ್ರಾಪ್ತಿಯಾಗುವುದಿಲ್ಲ. ಕೇವಲ ತಾವು ಬ್ರಾಹ್ಮಣ ಆತ್ಮರು ಈ ಭಾಗ್ಯದ ಅಧಿಕಾರಿಗಳಾಗಿದ್ದೀರಿ. ಈ ಬ್ರಾಹ್ಮಣ ಜನ್ಮವು ದೊರೆತಿರುವುದೇ ಕಲ್ಪದ ಹಿಂದಿನ ಭಾಗ್ಯದನುಸಾರ. ಜನ್ಮವೇ ಶ್ರೇಷ್ಠಭಾಗ್ಯದ ಆಧಾರದ ಮೇಲಿದೆ ಏಕೆಂದರೆ ಬ್ರಾಹ್ಮಣ ಜನ್ಮವು ಸ್ವಯಂ ಭಗವಂತನ ಮೂಲಕ ಲಭಿಸುತ್ತದೆ. ಅನಾದಿ ತಂದೆ ಮತ್ತು ಆದಿಬ್ರಹ್ಮಾರವರ ಮೂಲಕ ಈ ಅಲೌಕಿಕ ಜನ್ಮವು ಪ್ರಾಪ್ತಿಯಾಗಿದೆ. ಯಾರ ಜನ್ಮವೇ ಭಾಗ್ಯವಿದಾತನ ಮೂಲಕ ಆಗಿದೆಯೋ ಅವರ ಜನ್ಮವು ಎಷ್ಟು ಭಾಗ್ಯಶಾಲಿಯಾಯಿತು! ತಮ್ಮ ಈ ಶ್ರೇಷ್ಠಭಾಗ್ಯವನ್ನು ಸದಾ ಸ್ಮೃತಿಯಲ್ಲಿಟ್ಟುಕೊಂಡು ಹರ್ಷಿತರಾಗಿರುತ್ತೀರಾ? ಸದಾ ಸ್ಮೃತಿಯು ಪ್ರತ್ಯಕ್ಷಸ್ವರೂಪದಲ್ಲಿರಲಿ, ಸದಾ ಮನಸ್ಸಿನಲ್ಲಿ

ಇಮರ್ಜ್ ಮಾಡಿಕೊಳ್ಳಿ. ಕೇವಲ ಬುದ್ಧಿಯಲ್ಲಿ ಸಮಾವೇಶವಾಗಿದೆ ಎಂದಲ್ಲ. ಪ್ರತೀ ಚಲನೆ ಮತ್ತು ಚಹರೆಯಲ್ಲಿ ಸ್ಮೃತಿಸ್ವರೂಪವು ಪ್ರತ್ಯಕ್ಷರೂಪದಲ್ಲಿ ಸ್ವಯಂಗೆ ಅನುಭವವಾಗಲಿ ಮತ್ತು ಅನ್ಯರಿಗೂ ಕಂಡು ಬರಲಿ- ಇವರ ಚಲನೆ-ಚಹರೆಯಲ್ಲಿ ಶ್ರೇಷ್ಠಭಾಗ್ಯದ ರೇಖೆಯು ಸ್ಪಷ್ಟವಾಗಿ ಕಂಡುಬರುತ್ತದೆ ಎಂದು. ಎಷ್ಟು ಪ್ರಕಾರದ ಭಾಗ್ಯವು ಪ್ರಾಪ್ತಿಯಾಗಿದೆ. ಅದರ ಪಟ್ಟಿಯು ಸದಾ ಮಸ್ತಕದಲ್ಲಿ ಸ್ಪಷ್ಟವಾಗಿರಲಿ. ಕೇವಲ ಪುಸ್ತಕದಲ್ಲಿ ಪಟ್ಟಿಯಿರುವುದಲ್ಲ ಆದರೆ ಮಸ್ತಕದ ನಡುವೆ ಭಾಗ್ಯದ ರೇಖೆಯು ಹೊಳೆಯುತ್ತಿರುವುದು ಕಂಡುಬರಲಿ.

ಮೊದಲನೇ ಭಾಗ್ಯ- ಜನ್ಮವೇ ಭಾಗ್ಯವಿದಾತನ ಮುಖಾಂತರ ಆಗಿದೆ. ಎರಡನೇ ಮಾತು- ಸ್ವಯಂ ಭಗವಂತನೇ ತಂದೆ, ಶಿಕ್ಷಕ ಮತ್ತು ಸದ್ಗುರುವಾಗಿದ್ದಾರೆ. ಯಾವುದೇ ಆತ್ಮನಿಗಾಗಲಿ. ಧರ್ಮಾತ್ಮ, ಮಹಾನ್ ಆತ್ಮರಿಗಾಗಲಿ ಈ ಭಾಗ್ಯವಿಲ್ಲ. ಇಡೀ ಕಲ್ಪದಲ್ಲಿ ಇಂತಹವರು ಯಾರಾದರೂ ಇದ್ದಾರೆಯೇ? ಒಬ್ಬ ಭಗವಂತನ ಮುಖಾಂತರ ತಂದೆಯ ಸಂಬಂಧದಿಂದ ವಾರಸತ್ವವು(ಆಸ್ತಿಯು) ಪ್ರಾಪ್ತಿಯಾಗುತ್ತದೆ. ಶಿಕ್ಷಕನ ರೂಪದಿಂದ ಶ್ರೇಷ್ಠ ವಿದ್ಯೆ ಮತ್ತು ಪದವಿಯು ಪ್ರಾಪ್ತಿಯಾಗುತ್ತದೆ. ಸದ್ಗುರುವಿನ ರೂಪದಲ್ಲಿ ಮಹಾಮಂತ್ರ ಹಾಗೂ ವರದಾನದ ಪ್ರಾಪ್ತಿಯಾಗಿದೆ. ವಾರಸತ್ವದಲ್ಲಿ ಸರ್ವಖಜಾನೆಗಳ ಅಧಿಕಾರವನ್ನು ಪ್ರಾಪ್ತಿ ಮಾಡಿಕೊಂಡಿದ್ದೀರಿ. ಸರ್ವಖಜಾನೆಗಳು ಇವೆಯಲ್ಲವೆ. ಯಾವುದಾದರೂ ಖಜಾನೆಯ ಕೊರತೆಯಿದೆಯೇ? ನಿಮಿತ್ತ ಸಹೋದರಿಯರಿಗೆ ಯಾವುದಾದರೂ ಕೊರತೆಯಿದೆಯೇ? ಮನೆಯು ದೊಡ್ಡದಾಗಿರಬೇಕು, ಒಳ್ಳೊಳ್ಳೆಯ ಜಿಜ್ಞಾಸುಗಳಿರಬೇಕು- ಈ ಕೊರತೆಯೇ? ಇಲ್ಲ. ಎಷ್ಟು ಸೇವೆಯು ನಿರ್ವಿಘ್ನವಾಗಿ ಮುಂದುವರೆಯುತ್ತದೆಯೋ ಅದರಂತೆಯೇ ಸೇವೆಯ ಜೊತೆಗೆ ಸೇವಾಸಾಧನಗಳು ಸಹಜ ಮತ್ತು ಸ್ವತಹವಾಗಿ ಹೆಚ್ಚುತ್ತಾಹೋಗುತ್ತವೆ.

ತಂದೆಯ ಮೂಲಕ ಆಸ್ತಿ ಮತ್ತು ಶ್ರೇಷ್ಠಪಾಲನೆಯು ಸಿಗುತ್ತಿದೆ. ಪರಮಾತ್ಮ ಪಾಲನೆಯು ಎಷ್ಟು ಶ್ರೇಷ್ಠಮಾತಾಗಿದೆ! ಪರಮಾತ್ಮನೇ ಪಾಲನಾಕರ್ತ ಆಗಿದ್ದಾರೆ ಎಂದು ಭಕ್ತಿಯಲ್ಲಿ ಹಾಡುತ್ತಾರೆ ಆದರೆ ತಾವು ಭಾಗ್ಯಶಾಲಿ ಆತ್ಮರು ಪ್ರತೀ ಹೆಜ್ಜೆಯನ್ನು ಪರಮಾತ್ಮ ಪಾಲನೆಯ ಮೂಲಕವೇ ಅನುಭವ ಮಾಡುತ್ತೀರಿ. ಪರಮಾತ್ಮನ ಶ್ರೀಮತವೇ ಪಾಲನೆಯಾಗಿದೆ. ಶ್ರೀಮತವಿಲ್ಲದೆ ಅರ್ಥಾತ್ ಪರಮಾತ್ಮನ ಪಾಲನೆಯಿಲ್ಲದೆ ಒಂದು ಹೆಜ್ಜೆಯನ್ನೂ ಇಡಲು ಸಾಧ್ಯವಿಲ್ಲ, ಇಂತಹ ಪಾಲನೆಯು ಕೇವಲ ಈಗ ಪ್ರಾಪ್ತಿಯಾಗಿದೆ ಸತ್ಯಯುಗದಲ್ಲಿಯೂ ಸಿಗುವುದಿಲ್ಲ. ಅದಂತೂ ದೇವಾತ್ಮರ ಪಾಲನೆಯಾಗಿದೆ ಮತ್ತು ಈಗ ಪರಮಾತ್ಮನ ಪಾಲನೆಯಲ್ಲಿ ನಡೆಯುತ್ತಿದ್ದೀರಿ. ಈಗ ಪ್ರತ್ಯಕ್ಷ ಅನುಭವದಿಂದ ಹೇಳುತ್ತೀರಿ. ನಮ್ಮ ಪಾಲನಾಕರ್ತ ಸ್ವಯಂ ಭಗವಂತನಾಗಿದ್ದಾರೆ. ದೇಶದಲ್ಲಿದ್ದರೂ, ವಿದೇಶದಲ್ಲಿದ್ದರೂ ಪ್ರತಿಯೊಬ್ಬ ಬ್ರಾಹ್ಮಣ ಆತ್ಮನು ನಶೆಯಿಂದ ಹೇಳುತ್ತಾನೆ- ನನ್ನ ಪಾಲನಾಕರ್ತ ಪರಮಾತ್ಮನಾಗಿದ್ದಾರೆ. ಇಷ್ಟು ನಶೆಯಿದೆಯೇ! ಕೆಲವೊಮ್ಮೆ (ಮರ್ಜ್)ಗುಪ್ತವಾಗಿ ಇನ್ನೂ ಕೆಲವೊಮ್ಮೆ ಪ್ರತ್ಯಕ್ಷ (ಇಮರ್ಜ್) ಆಗುತ್ತದೆಯೇ? ಜನ್ಮ ಪಡೆಯುತ್ತಿದ್ದಂತೆಯೇ ಬೇಹದ್ದಿನ ಖಜಾನೆಗಳಿಂದ ಸಂಪನ್ನರಾಗಿ ಅವಿನಾಶಿ ಆಸ್ತಿಯ ಅಧಿಕಾರವನ್ನು ಪಡೆದುಕೊಂಡಿದ್ದೀರಿ.

ಜೊತೆಜೊತೆಗೆ ಜನ್ಮ ಪಡೆಯುತ್ತಿದ್ದಂತೆಯೇ ತ್ರಿಕಾಲದರ್ಶಿ, ಸತ್ಯಶಿಕ್ಷಕನು ಮೂರುಕಾಲಗಳ ವಿದ್ಯೆಯನ್ನು ಎಷ್ಟು ಸಹಜವಿಧಿಯಿಂದ ಓದಿಸಿದರು! ಎಷ್ಟು ಶ್ರೇಷ್ಠವಿದ್ಯೆಯಾಗಿದೆ ಮತ್ತು ಓದಿಸುವವರೂ ಸಹ ಎಷ್ಟು ಶ್ರೇಷ್ಠವಾಗಿದ್ದಾರೆ ಆದರೆ ಯಾರಿಗೆ ಓದಿಸಿದರು? ಯಾರು ನಿರಾಶಾವಾದಿಗಳಾಗಿದ್ದಾರೆಯೋ ಅವರನ್ನೇ ಆಶಾವಾದಿಗಳನ್ನಾಗಿ ಮಾಡಿದರು.

ಕೇವಲ ಓದಿಸಲಿಲ್ಲ ಆದರೆ ವಿದ್ಯೆಯನ್ನು ಓದುವ ಲಕ್ಷ್ಯವೇ ಆಗಿದೆ- ಶ್ರೇಷ್ಠಾತಿಶ್ರೇಷ್ಠ ಪದವಿಯನ್ನು ಪ್ರಾಪ್ತಿ ಮಾಡಿಕೊಳ್ಳುವುದು. ಪರಮಾತ್ಮನ ವಿದ್ಯೆಯಿಂದ ಯಾವ ಶ್ರೇಷ್ಠಪದವಿಯನ್ನು ಪ್ರಾಪ್ತಿ ಮಾಡಿಕೊಳ್ಳುತ್ತಿದ್ದೀರಿ. ಈ ಪದವಿಯು ಇಡೀ ವಿಶ್ವದ ಶ್ರೇಷ್ಠಾತಿಶ್ರೇಷ್ಠ ಪದವಿಗಳ ಮುಂದೆ ಎಷ್ಟೊಂದು ಶ್ರೇಷ್ಠವಾಗಿದೆ! ಅನಾದಿ ಸೃಷ್ಟಿಚಕ್ರದಲ್ಲಿ ದ್ವಾಪರದಿಂದ ಹಿಡಿದು ಇಲ್ಲಿಯವರೆಗೆ ಯಾವುದೆಲ್ಲಾ ವಿನಾಶೀ ಪದವಿಗಳು ಪ್ರಾಪ್ತಿಯಾಗಿದೆಯೋ ಅವುಗಳಲ್ಲಿ ಸರ್ವಶ್ರೇಷ್ಠ ಪದವಿಯೆಂದರೆ ಮೊದಲು ರಾಜ್ಯಪದವಿ ಎಂದು ಗಾಯನವಿದೆ. ಆದರೆ ತಮ್ಮ ರಾಜ್ಯ ಪದವಿಯ ಮುಂದೆ ಆ ರಾಜ್ಯಪದವಿ ಎಷ್ಟುಮಾತ್ರ? ಅದು ಶ್ರೇಷ್ಠವೇ? ಈಗಿನ ಅತ್ಯುನ್ನತ ಪದವಿ ರಾಷ್ಟ್ರಪತಿ, ಪ್ರಧಾನಮಂತ್ರಿಯದಾಗಿದೆ. ಅತಿದೊಡ್ಡ ವಿದ್ಯೆಯ ಮೂಲಕ ತತ್ವಶಾಸ್ತ್ರಜ್ಞ, ಚೇರ್‌ಮೆನ್, ಡೈರೆಕ್ಟರ್, ಇತ್ಯಾದಿ. ಆಗಿರುತ್ತಾರೆ. ಅತಿದೊಡ್ಡ ಅಧಿಕಾರಿಯೇ ಆಗಬಹುದು ಆದರೆ ಇವೆಲ್ಲಾ ಪದವಿಗಳು ತಮ್ಮ ಮುಂದೆ ಏನಾಗಿದೆ!! ತಮಗೆ ಒಂದು ಜನ್ಮದಲ್ಲಿ ಜನ್ಮ-ಜನ್ಮಗಳಿಗಾಗಿ ಶ್ರೇಷ್ಠ ಪದವಿಯು ಪ್ರಾಪ್ತಿಯಾಗುವ ಪರಮಾತ್ಮನ ಗ್ಯಾರಂಟಿಯಿದೆ ಮತ್ತು ಅವರದು ಒಂದು ಜನ್ಮದ ವಿದ್ಯೆಯಿಂದ ಒಂದು ಜನ್ಮದ ಪದವಿಯೂ ಸಹ ಪ್ರಾಪ್ತಿಯಾಗುವುದು ಗ್ಯಾರಂಟಿಯಿಲ್ಲ. ತಾವು ಎಷ್ಟೊಂದು ಭಾಗ್ಯಶಾಲಿಗಳಾಗಿದ್ದೀರಿ. ನಿಮ್ಮ ಪದವಿಯೂ ಸರ್ವಶ್ರೇಷ್ಠ ಮತ್ತು ಒಂದುಜನ್ಮದ ವಿದ್ಯೆ ಹಾಗೂ ಅನೇಕ ಜನ್ಮಗಳ ಪದವಿಯ ಪ್ರಾಪ್ತಿ! ಅಂದಮೇಲೆ ಭಾಗ್ಯವಲ್ಲವೆ! ಚಹರೆಯಿಂದ ಕಂಡು ಬರುತ್ತದೆಯೇ? ನಡವಳಿಕೆಯಿಂದ ಕಾಣಿಸುತ್ತದೆಯೇ? ಏಕೆಂದರೆ ನಡವಳಿಕೆಯಿಂದಲೇ ಮನುಷ್ಯರ ಸ್ಥಿತಿಗತಿಯು ಅರ್ಥವಾಗಿಬಿಡುತ್ತದೆ ಅಂದಮೇಲೆ ತಮ್ಮದು ಇಂತಹ ನಡವಳಿಕೆಯಾಗಿದೆಯೇ? ತಮ್ಮ ಇಷ್ಟೂ ಶ್ರೇಷ್ಠಭಾಗ್ಯದ ಸ್ಥಿತಿಗತಿಯು ಕಂಡುಬರಬೇಕು ಅಥವಾ ಈಗಲೂ ಸಾಧಾರಣವೆನಿಸುತ್ತೀರಾ- ಹೇಗಿದೆ? ಸಾಧಾರಣತೆಯಲ್ಲಿ ಮಹಾನತೆಯು ಕಂಡುಬರಲಿ. ತಮ್ಮ ಜಡಚಿತ್ರಗಳೇ ಇಲ್ಲಿಯವರೆಗೂ ಮಹಾನತೆಯ ಅನುಭವ ಮಾಡಿಸುತ್ತಿವೆ. ಈಗಲೂ ಸಹ ಎಂತಹದ್ದೇ ಆತ್ಮನನ್ನು ವೇಷ ಹಾಕಿ ಲಕ್ಷ್ಮೀ-ನಾರಾಯಣ ಅಥವಾ ರಾಮ-ಸೀತೆಯಂತೆ ದೇವಿಯರನ್ನಾಗಿ ತಯಾರು ಮಾಡಿದಾಗ ಸಾಧಾರಣ ವ್ಯಕ್ತಿಯಲ್ಲಿಯೂ ಮಹಾನತೆಯ ಅನುಭವ ಮಾಡಿ ತಲೆಬಾಗಿಸುತ್ತಾರಲ್ಲವೆ. ವಾಸ್ತವದಲ್ಲಿ ಇವರು ನಾರಾಯಣ ಅಥವಾ ರಾಮನಲ್ಲ, ಕೇವಲ ವೇಷವನ್ನು ಧರಿಸಿದ್ದಾರೆಂಬುದು ತಿಳಿದಿರುತ್ತದೆ ಆದರೂ ಸಹ ಆ ಸಮಯದಲ್ಲಿ ಮಹಾನತೆಗೆ ತಲೆಬಾಗಿರುತ್ತಾರೆ, ನಮನ-ಪೂಜೆಗಳನ್ನು ಮಾಡುತ್ತಾರೆ. ಆದರೆ ತಾವಂತೂ ಸ್ವಯಂ ಚೈತನ್ಯ ದೇವ-ದೇವಿಯರ ಆತ್ಮರಾಗಿದ್ದೀರಿ. ತಾವು ಚೈತನ್ಯ ಆತ್ಮರಿಂದ ಇಷ್ಟೊಂದು ಮಹಾನತೆಯ ಅನುಭೂತಿಯಾಗಬೇಕು! ಆಗುತ್ತದೆಯೇ? ತಮ್ಮ ಶ್ರೇಷ್ಠಭಾಗ್ಯಕ್ಕೆ ಮನಸ್ಸಿನಿಂದ ನಮಸ್ಕಾರ ಮಾಡಿರಿ. ಅಥವಾ ತಲೆಯಿಂದಲ್ಲ ಆದರೆ ಮನಸ್ಸಿನಿಂದ ತಮ್ಮ ಭಾಗ್ಯದ ಅನುಭವ ಮಾಡಿ ಸ್ವಯಂ ಖುಷಿಯಲ್ಲಿ ನರ್ತಿಸಿರಿ.

ಇಷ್ಟು ಶ್ರೇಷ್ಠವಿದ್ಯೆಯ ಪ್ರಾಪ್ತಿಯು ಶ್ರೇಷ್ಠಭಾಗ್ಯವಾಗಿದೆ. ಮನುಷ್ಯರು ಓದುವುದೇ ಈ ಜೀವನದ ಶರೀರ ನಿರ್ವಹಣಾರ್ಥ ಸಂಪಾದನೆಗಾಗಿ. ಅದನ್ನೆ ಆದಾಯದ ಮೂಲವೆಂದು ಹೇಳಲಾಗುತ್ತದೆ. ತಮ್ಮ ವಿದ್ಯೆಯ ಮೂಲಕ ಆದಾಯದ ಮೂಲವು ಎಷ್ಟಿದೆ? ಸಂಪನ್ನರಾಗಿದ್ದೀರಲ್ಲವೆ! ತಮ್ಮ ಆದಾಯದ ಲೆಕ್ಕವಿದೆಯೇ? ಅವರದು ಲಕ್ಷಗಳಲ್ಲಿ, ಕೋಟಿಗಳಲ್ಲಿ ಲೆಕ್ಕವಿರುತ್ತದೆ ಆದರೆ ತಮ್ಮ ಲೆಕ್ಕವೇನಾಗಿದೆ? ತಮ್ಮದು ಎಷ್ಟು ಆದಾಯವಿದೆ? ಒಂದೊಂದು ಹೆಜ್ಜೆಯಲ್ಲಿ ಪದಮದಷ್ಟು. ಅಂದಾಗ ಇಡೀ ದಿನದಲ್ಲಿ ಎಷ್ಟು ಹೆಜ್ಜೆಗಳನ್ನು ಇಡುತ್ತೀರಿ ಮತ್ತು ಎಷ್ಟು ಪದಮಗಳನ್ನು ಜಮಾ

ಮಾಡಿಕೊಳ್ಳುತ್ತೀರಿ? ಇಷ್ಟು ಸಂಪಾದನೆಯು ಮತ್ತಾರಿಗಾದರೂ ಇದೆಯೇ? ತಮ್ಮದು ಎಷ್ಟು ದೊಡ್ಡ ಭಾಗ್ಯವಾಗಿದೆ! ಆದ್ದರಿಂದ ತಮ್ಮ ವಿದ್ಯೆಯ ಭಾಗ್ಯವನ್ನು ಪ್ರತ್ಯಕ್ಷ ರೂಪದಲ್ಲಿ ಅನುಭವ ಮಾಡಿರಿ. ಯಾರೊಂದಿಗಾದರೂ ಕೇಳಲಿ, ಬ್ರಹ್ಮಾಕುಮಾರ- ಕುಮಾರಿಯಂತೂ ಆಗಿಬಿಟ್ಟಿದ್ದೇವೆ ಎಂದು ಹೇಳುತ್ತಾರೆ ಆದರೆ ಬ್ರಹ್ಮಾಕುಮಾರ-ಕುಮಾರಿ ಅರ್ಥಾತ್ ಶ್ರೇಷ್ಠಭಾಗ್ಯದ ರೇಖೆಯು ಮಸ್ತಕದಲ್ಲಿ ಹೊಳೆಯುತ್ತಿರುವುದು ಕಂಡುಬರಲಿ, ಬ್ರಹ್ಮಾಕುಮಾರ-ಕುಮಾರಿಯಂತೂ ಆಗಿದ್ದೇವೆ ಆದ್ದರಿಂದ ಪ್ರಾಪ್ತಿಯಂತೂ ಆಗಿಬಿಡುವುದು, ನಡೆಯುವುದಂತೂ ನಡೆಯುತ್ತಿದ್ದೇವೆ, ಯಾವುದರೊಂದು ಪದವಿಯನ್ನು ಪಡೆದದೇ ಪಡೆಯುತ್ತೇವೆ ಎಂದು ಹೇಳುತ್ತಿದ್ದಾರೆ. ಆಗಿಬಿಟ್ಟಿದ್ದೀರೋ ಅಥವಾ ಭಾಗ್ಯವನ್ನು ನೋಡಿ ಹಾರುತ್ತಿದ್ದೀರೋ? ಇದರಲ್ಲಿ ಆಗುವುದಂತೂ ಆಗಿಬಿಟ್ಟಿದ್ದೇವೆ, ಆಗುತ್ತಿದ್ದೇವೆ, ನಡೆಯುತ್ತಲೇ ಇದ್ದೇವೆ.... ಈ ಮಾತು ಯಾರದು? ಈ ಮಾತುಗಳು ಶ್ರೇಷ್ಠಭಾಗ್ಯಶಾಲಿ ಅತ್ಮರ ಮಾತುಗಳೇ? ಬ್ರಹ್ಮಾಕುಮಾರ ಮತ್ತು ಬ್ರಹ್ಮಾಕುಮಾರಿ ಅರ್ಥಾತ್ ಮೋಜಿನಿಂದ ಪ್ರೀತಿಯ ಜೀವನವನ್ನು ಕಳೆಯುವವರು. ಕೆಲವೊಮ್ಮೆ ಪ್ರೀತಿಯ ಜೀವನ, ಕೆಲವೊಮ್ಮೆ ಬಲವಂತದ ಜೀವನ- ಈ ರೀತಿಯಲ್ಲ, ಯಾವುದೇ ಸಮಸ್ಯೆಯು ಬಂದಾಗ ಏನು ಹೇಳುತ್ತೀರಿ? ನಾವೇನು ಅಂದುಕೊಳ್ಳಲಿಲ್ಲ ಆದರೂ ಬಲಹೀನವಾಗಿಬಿಟ್ಟೆವು ಎಂದು ಹೇಳುತ್ತೀರಿ. ಭಾಗ್ಯಶಾಲಿಗಳು ಎಂದರೆ ಪರಿಶ್ರಮ ಸಮಾಪ್ತಿಯಾಗಿ ಪ್ರೀತಿಯಿಂದ ನಡೆಯುವವರು ಎಂದರ್ಥ. ಅಂದುಕೊಳ್ಳಲ್ಲ ಆದರೂ...... ಇಂತಹ ಭಾಷೆ ಭಾಗ್ಯಶಾಲಿ ಬ್ರಾಹ್ಮಣ ಅತ್ಮರದಲ್ಲ. ಭಾಗ್ಯಶಾಲಿ ಆತ್ಮರು ಪ್ರೀತಿಯ ಉಯ್ಯಾಲೆಯಲ್ಲಿ ಮೋಜಿನಲ್ಲಿ ಹಾರುತ್ತಾರೆ. ಹಾರುವಕಲೆಯ ಮೋಜಿನಲ್ಲಿರುತ್ತಾರೆ. ಅವರಮುಂದೆ ಪರಿಶ್ರಮವು ಬರಲು ಸಾಧ್ಯವಿಲ್ಲ. ತಿಳಿಯಿತೆ- ತಮ್ಮ ಶ್ರೇಷ್ಠ ಭಾಗ್ಯವನ್ನು ಗುಪ್ತ ಮಾಡಿಕೊಳ್ಳಬೇಡಿ. ಪ್ರತ್ಯಕ್ಷ ಮಾಡಿಕೊಳ್ಳಿರಿ.

ಮೂರನೆಯ ವಿಷಯ- ಸದ್ಗುರುವಿನ ಮೂಲಕ ಯಾವ ಭಾಗ್ಯವು ಪ್ರಾಪ್ತಿಯಾಯಿತು? ಮೊದಲು ಮಹಾಮಂತ್ರವು ಸಿಕ್ಕಿತು. ಸದ್ಗುರುವಿನ ಯಾವ ಮಹಾಮಂತ್ರವು ಸಿಕ್ಕಿತು" ಪವಿತ್ರರಾಗಿ, ಯೋಗಿಗಳಾಗಿ, ಜನ್ಮ ಪಡೆಯುತ್ತಿದ್ದಂತೆಯೇ ಸದ್ಗುರುವಿನ ಮೂಲಕ ಈ ಮಹಾಮಂತ್ರವು ಪ್ರಾಪ್ತಿಯಾಯಿತು ಮತ್ತು ಸರ್ವಮಕ್ಕಳಿಗೆ ಈ ಮಹಾಮಂತ್ರವು ಸರ್ವಪ್ರಾಪ್ತಿಗಳ ಚಾವಿಯಾಗಿ (ಬೀಗದ ಕೈ) ಸಿಕ್ಕಿತು. "ಯೋಗಿ ಜೀವನ ಪವಿತ್ರ ಜೀವನ"ವೇ ಸರ್ವಪ್ರಾಪ್ತಿಗಳ ಆಧಾರವಾಗಿದೆ ಆದ್ದರಿಂದ ಇದು ಬೀಗದಕ್ಕೆ ಆಗಿದೆ. ಒಂದುವೇಳೆ ಪವಿತ್ರತೆಯಿಲ್ಲವೆಂದರೆ ಯೋಗಿ ಜೀವನವೂ ಇಲ್ಲ. ಅಧಿಕಾರಿಗಳಾಗಿದ್ದರೂ ಸಹ ಅಧಿಕಾರದ ಅನುಭೂತಿ ಮಾಡಲು ಸಾಧ್ಯವಿಲ್ಲ ಆದ್ದರಿಂದ ಈ ಮಹಾಮಂತ್ರವು ಸರ್ವಖಜಾನೆಗಳ ಅನುಭೂತಿಯ ಬೀಗದಕ್ಕೆ ಆಗಿದೆ. ಇಂತಹ ಮಹಾಮಂತ್ರವು ಸದ್ಗುರುವಿನ ಮೂಲಕ ಎಲ್ಲರಿಗೆ ಶ್ರೇಷ್ಠಭಾಗ್ಯದಲ್ಲಿ ಸಿಕ್ಕಿದೆ ಮತ್ತು ಜೊತೆಜೊತೆಗೆ ಸದ್ಗುರುವಿನ ಮೂಲಕ ವರದಾನಗಳು ಪ್ರಾಪ್ತಿಯಾಗಿದೆ. ವರದಾನಗಳ ಪಟ್ಟಿಯು ಬಹಳ ಉದ್ದವಾಗಿದೆಯಲ್ಲವೆ! ಎಷ್ಟು ವರದಾನಗಳು ಸಿಕ್ಕಿವೆ? ಇಷ್ಟೊಂದು ವರದಾನಗಳ ಪ್ರಾಪ್ತಿಯು ನಿಮಗೇ ಆಗಿದೆ. ಆ ವರದಾನಗಳಿಂದಲೇ ಇಡೀ ಬ್ರಾಹ್ಮಣ ಜೀವನವನ್ನು ಕಳೆಯುತ್ತಿದ್ದೀರಿ ಮತ್ತು ಕಳೆಯಬಲ್ಲಿರಿ. ಎಷ್ಟೊಂದು ವರದಾನಗಳಿವೆ. ಅದರ ಪಟ್ಟಿಯು ತಿಳಿದಿದೆಯೇ? ಅಂದಾಗ ಆಸ್ತಿಯೂ ಇದೆ. ವಿದ್ಯೆಯೂ ಇದೆ. ಮಹಾಮಂತ್ರದ ಕೀಲಿಕೈ ಮತ್ತು ವರದಾನಗಳ ಗಣಿಯೂ(ಖಜಾನೆ) ಇದೆ. ಅಂದಮೇಲೆ ಎಷ್ಟೊಂದು

ಭಾಗ್ಯಶಾಲಿಗಳಾಗಿದ್ದೀರಿ! ಅಥವಾ ಮುಂದೆಹೋಗಿ ಅಂತ್ಯದಲ್ಲಿ ತೆರೆಯೋಣವೆಂದು ತಿಳಿದು ಬಚ್ಚಿಟ್ಟಿದ್ದೀರಾ? ಬಹಳ ಕಾಲದಿಂದ ಭಾಗ್ಯದ ಅನುಭೂತಿ ಮಾಡುವವರು ಅಂತ್ಯದಲ್ಲಿ ಪದಮಾಪದಮ ಭಾಗ್ಯವಂತರಾಗಿ ಪ್ರತ್ಯಕ್ಷವಾಗುತ್ತಾರೆ. ಈಗಿಲ್ಲದಿದ್ದರೆ ಅಂತ್ಯದಲ್ಲಿಯೂ ಇಲ್ಲ. ಈಗಿದ್ದರೆ ಅಂತ್ಯದಲ್ಲಿಯೂ ಇರುತ್ತದೆ. ಸಂಪೂರ್ಣರಂತೂ ಅಂತ್ಯದಲ್ಲಿಯೇ ಆಗಬೇಕಾಗಿದೆ ಎಂದು ಯೋಚಿಸಬೇಡಿ. ಸಂಪೂರ್ಣತೆಯ ಜೀವನದ ಅನುಭವವು ಈಗಿನಿಂದಲೇ ಆರಂಭವಾಗುವುದು ಆಗಲೇ ಅಂತ್ಯದಲ್ಲಿ ಪ್ರತ್ಯಕ್ಷರೂಪದಲ್ಲಿ ಬರುತ್ತದೆ. ಈಗ ಸ್ವಯಂಗೆ ಅನುಭವವಾಗಲಿ, ಅನ್ಯರಿಗೆ ಅನುಭವವಾಗಲಿ. ಯಾರು ಸಮೀಪ ಸಂಪರ್ಕದಲ್ಲಿ  ಬಂದಿದ್ದಾರೆಯೋ ಅವರಿಗೂ ಅನುಭವವಾಗಲಿ ಮತ್ತು ಅಂತ್ಯದಲ್ಲಿ ಅದೇ ವಿಶ್ವದಲ್ಲಿ ಪ್ರತ್ಯಕ್ಷವಾಗುವುದು, ತಿಳಿಯಿತೆ-

ಬಾಪ್‌ದಾದಾರವರು ಇಂದು ಸರ್ವಮಕ್ಕಳ ಭಾಗ್ಯದ ಶ್ರೇಷ್ಠರೇಖೆಯನ್ನು ನೋಡುತ್ತಿದ್ದೆವು. ಎಷ್ಟು ತಂದೆಯು ಭಾಗ್ಯವನ್ನು ನೋಡಿದರೋ ಅಷ್ಟಕ್ಕಿಂತ ಮಕ್ಕಳು  ಕಡಿಮೆ ಅನುಭವವನ್ನು ಮಾಡುತ್ತದ್ದೀರಿ. ಭಾಗ್ಯದ ಗಣಿಯು ಎಲ್ಲರಿಗೂ ಪ್ರಾಪ್ತಿಯಾಗಿದೆ ಆದರೆ ಕೆಲವರಿಗೆ ಕಾರ್ಯದಲ್ಲಿ ತೊಡಗಿಸಲು ಬರುತ್ತಿದೆ. ಇನ್ನೂ ಕೆಲವರಿಗೆ ಕಾರ್ಯದಲ್ಲಿ ತೊಡಗಿಸಲು ಬರುತ್ತಿಲ್ಲ. ಎಷ್ಟು ತೊಡಗಿಸಬೇಕೊ ಅಷ್ಟು ತೊಡಗಿಸುತ್ತಿಲ್ಲ. ಎಲ್ಲರಿಗೂ ಒಂದೇ ರೀತಿಯಾಗಿ ಸಿಕ್ಕಿದೆ ಆದರೆ ಖಜಾನೆಗಳನ್ನು ಕಾರ್ಯದಲ್ಲಿ ಉಪಯೋಗಿಸಿ ತಂದೆಯ ಖಜಾನೆಯೇ ನನ್ನ ಖಜಾನೆಯೆಂದು ಅನುಭವ ಮಾಡುವುದರಲ್ಲಿ ನಂಬರ್‌ವಾರ್ ಇದ್ದಾರೆ. ತಂದೆಯು ನಂಬರ್‌ವಾರ್ ಕೊಡಲಿಲ್ಲ. ಎಲ್ಲರಿಗೂ ನಂಬರ್‌ವನ್ ಆಗಿ ನೀಡಿದ್ದೇವೆ ಆದರೆ ಕಾರ್ಯದಲ್ಲಿ ತೊಡಗಿಸುವುದರಲ್ಲಿ ತಮಗೆ ತಾವು ನಂಬರ್ ಕೊಟ್ಟುಕೊಳ್ಳುತ್ತೀರಿ, ತಿಳಿಯಿತೇ- ನಂಬರ್‌ವಾರ್ ಏಕೆ ಆಗುತ್ತಾರೆ ಎಂದು? ಎಷ್ಟು ಉಪಯೋಗಿಸುತ್ತೀರೋ, ಕಾರ್ಯದಲ್ಲಿ ತೊಡಗಿಸುತ್ತೀರೋ ಅಷ್ಟು ಹೆಚ್ಚುತ್ತಾ ಹೋಗುವುದು. ಗುಪ್ತ ಮಾಡಿ ಇಟ್ಟುಕೊಂಡರೆ ಅದು ವೃದ್ಧಿಯಾಗುವುದಿಲ್ಲ ಮತ್ತು ಸ್ವಯಂಗೂ ಅನುಭವ ಆಗುವುದಿಲ್ಲ, ಅನ್ಯರಿಗೂ ಅನುಭವ ಮಾಡಿಸಲು ಸಾಧ್ಯವಿಲ್ಲ ಆದ್ದರಿಂದ ನಡವಳಿಕೆ ಮತ್ತು ಚಹರೆಯಲ್ಲಿ ತಂದುಕೊಳ್ಳಿರಿ. ಏನು ಮಾಡಬೇಕೆಂದು ತಿಳಿಯಿತೇ- ಯಾವುದೇ ನಂಬರ್ ಬಂದರೂ ಪರವಾಗಿಲ್ಲ. 108ರಲ್ಲಿ ಇಲ್ಲದಿದ್ದರೆ 16,000ದ ಮಾಲೆಯಲ್ಲಿ ಸಿಕ್ಕರೂ ಪರವಾಗಿಲ್ಲ. ಅಂತೂ ಯಾವುದೋ ಒಂದು ಪದವಿ ಸಿಕ್ಕರೆ ಸಾಕು ಎಂದು ತಿಳಿಯಬೇಡಿ. 16,000ದ ಮಾಲೆಯು ಸದಾ ಜಪಿಸಲ್ಪಡುವುದಿಲ್ಲ. ಎಲ್ಲಿಯೋ ಕೆಲವೊಂದೆಡೆ ಕೆಲಕೆಲವೊಮ್ಮೆ ಮಾತ್ರವೇ ಜಪಿಸುತ್ತಾರೆ. 108ರ ಮಾಲೆಯನ್ನು ಸದಾ ಜಪಿಸುತ್ತಾ ಇರುತ್ತಾರೆ ಅಂದಮೇಲೆ ಈಗ 'ನಾನು ಯಾರು?' - ಇದನ್ನು ಸ್ವಯಂ ತಿಳಿದುಕೊಳ್ಳಿರಿ. ಒಂದುವೇಳೆ ತಂದೆಯಾಗಲಿ ಅಥವಾ ಮತ್ತಾರಾದರೂ ತಾವು 16,000ದ ಮಾಲೆಯಲ್ಲಿ ಬರುತ್ತೀರೆಂದರೆ ಏನು ಹೇಳುತ್ತೀರಿ? ಒಪ್ಪಿಕೊಳ್ಳುತ್ತೀರಾ? ಪ್ರಶ್ನೆಯು ಆರಂಭವಾಗಿಬಿಡುತ್ತದೆ ಆದ್ದರಿಂದ ತಮ್ಮನ್ನು ತಾವು ತಿಳಿದುಕೊಳ್ಳಿರಿ- ನಾನು ಯಾರು? ಒಳ್ಳೆಯದು!

**ನಾಲ್ಕಾರುಕಡೆಯ ಸರ್ವಶ್ರೇಷ್ಠ ಭಾಗ್ಯಶಾಲಿ ಆತ್ಮರಿಗೆ,  ಜನ್ಮದಿಂದಲೇ ಪ್ರಾಪ್ತಿಯಾದ ಪರಮಾತ್ಮ- ಜನ್ಮದ ಅಧಿಕಾರಿ ಆತ್ಮರೆಲ್ಲರಿಗೆ, ತಂದೆಯ ಮೂಲಕ ಶ್ರೇಷ್ಠ ಆಸ್ತಿ ಮತ್ತು ಪರಮಾತ್ಮನ ಪಾಲನೆಯನ್ನು ಪಡೆದುಕೊಳ್ಳುವವರೆಲ್ಲರಿಗೆ, ಸತ್ಯಶಿಕ್ಷಕನ ಶ್ರೇಷ್ಠಪದವಿ ಮತ್ತು ಶ್ರೇಷ್ಠ ಸಂಪಾದನೆ ಮಾಡಿಕೊಳ್ಳುವವರಿಗೆ, ಸದ್ಗುರುವಿನ ಮೂಲಕ ಮಹಾಮಂತ್ರ ಹಾಗೂ**

**ಸರ್ವವರದಾನಗಳನ್ನು ಪ್ರಾಪ್ತಿ ಮಾಡಿಕೊಳ್ಳುವಂತಹ ಅತಿಶ್ರೇಷ್ಠ ಪದಮಾಪದಮ್ ಶ್ರೇಷ್ಠಾತ್ಮರಿಗೆ, ಪ್ರತೀ ಹೆಜ್ಜೆಯಲ್ಲಿ ಪದಮದಷ್ಟು ಜಮಾ ಮಾಡಿಕೊಳ್ಳುವಂತಹ ಶ್ರೇಷ್ಠ ಆತ್ಮರಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಹಾಗು ನಮಸ್ತೆ.**

**ಅವ್ಯಕ್ತ ಬಾಪ್ ದಾದಾರವರೊಂದಿಗೆ ವೈಯಕ್ತಿಕ ಭೇಟಿ:-**

1ನೇ ಗುಂಪು:-

"ಯಥಾರ್ಥ ಸೇವೆ ಮತ್ತು ಯಧಾರ್ಥ ನೆನಪಿನ ಲಕ್ಷಣವಾಗಿದೆ - ನಿರ್ವಿಘ್ನವಾಗಿರುವುದು ಮತ್ತು ನಿರ್ವಿಘ್ನರನ್ನಾಗಿ ಮಾಡುವುದು"

ಸದಾ ತಮ್ಮ ಶ್ರೇಷ್ಠ ಭಾಗ್ಯದ ಗೀತಯು ಸ್ವತಃ ಮನಸ್ಸಿನಲ್ಲಿ ಮೊಳಗುತ್ತಿರುತ್ತರಯೇ? ಇದು ಅನಾದಿ ಅವಿನಾಶಿ ಗೀತೆಯಾಗಿದೆ. ಇದನ್ನು ನುಡಿಸುವ ಅವಶ್ಯಕತೆಯಿಲ್ಲ ಆದರೆ ಸ್ವತಃವಾಗಿ ನುಡಿಯುತ್ತಿರುತ್ತದೆ. ಸದಾ ಈ ಗೀತೆ ಮೊಳಗುವುದು ಅರ್ಥಾತ್ ಸದಾ ತಮ್ಮ ಖುಷಿಯ ಖಜಾನೆಯನ್ನು ಅನುಭವ ಮಾಡುವುದು. ಸದಾ ಖುಷಿಯಾಗಿರುತ್ತೀರಾ? ಬ್ರಾಹ್ಮಣರ ಕೆಲಸವೇ ಆಗಿದೆ ಖುಷಿಯಾಗಿರುವುದು ಹಾಗು ಖುಷಿಯನ್ನು ಹಂಚುವುದು. ಇದೇ ಸೇವೆಯಲ್ಲಿ ವ್ಯಸ್ಥವಾಗಿರುತ್ತೀರಾ? ಅಥವಾ ಕೆಲವೊಮ್ಮೆ ಮರೆತು ಹೋಗುತ್ತಿರಾ? ಮಾಯೆ ಬಂದಾಗ ಏನು ಮಾಡುತ್ತಿರಿ? ಎಷ್ಟು ಸಮಯ ಮಾಯೆಯಿರುತ್ತದೆಯೋ ಅಷ್ಟು ಸಮಯ ಖುಷಿಯ ಗೀತೆಯು ಬಂದಾಗಿ ಬಿಡುತ್ತದೆ. ತಂದೆಯ ಹೊತೆ ಸದಾ ಇದ್ದರೆ ಮಾಯೆಯು ಬರಲು ಸಾಧ್ಯವಿಲ್ಲ. ಮಾಯೆಯು ಬರುವ ಮೊದಲು ತಂದೆಯ ಜೊತೆಯಿಂದ ಬೇರೆ ಮಾಡಿ ನಿಮ್ಮನ್ನು ಒಂಟಿಯನ್ನಾಗಿ ಮಾಡುತ್ತದೆ. ನಂತರ ದಾಳಿ ಮಾಡುತ್ತದೆ. ಒಂದುವೇಳೆ ತಂದೆಯು ಜೊತೆಯಲ್ಲಿದ್ದರೆ ಮಾಯೆ ನಮಸ್ಕಾರ ಮಾಡುತ್ತದೆ. ದಾಳಿ ಮಾಡುವುದಿಲ್ಲ. ಈಗ ಮಾಯೆಯನ್ನು ಚೆನ್ನಾಗಿ ಅರಿತುಕೊಂಡಿದ್ದೀರಾ ನಮ್ಮ ಶತ್ರುವಾಗಿದೆ ಎಂದ ಮೇಲೆ ಬರಲು ಏಕೆ ಬಿಡುತ್ತೀರಿ? ಜೊತೆಯನ್ನು ಬಿಟ್ಟು ಬಿಡುತ್ತೀರಲ್ಲವೇ. ಆದ್ದರಿಂದ ಮಾಯೆಗೆ ಬರಲು ಬಾಗಿಲು ಸಿಕ್ಕಿಬಿಡುತ್ತದೆ. ಬಾಗಿಲಿಗೆ ಡಬಲ್ ಲಾಕ್ ಹಾಕಿರಿ. ಒಂದು ಲಾಕ್ ಅಲ್ಲ ಇತ್ತೀಚಿನ ದಿನಗಳಲ್ಲಿ ಒಂದು ಲಾಕ್ ನೆಡೆಯುವುದಿಲ್ಲ ಎಂದಮೇಲೆ ಡಬಲ್ ಲಾಕ್ ಆಗಿದೆ - ನೆನಪು ಹಾಗೂ ಸೇವೆ. ಸೇವೆಯು ಕೂಡ ನಿಸ್ವಾರ್ಥ ಸೇವೆಯಾಗಿರಲಿ ಇದೇ ಲಾಕ್ ಆಗಿದೆ. ಒಂದು ವೇಳೆ ನಿಸ್ವಾರ್ಥ ಸೇವೆಯಿಲ್ಲದಿದ್ದರೆ ಆ ಲಾಕ್ ಸಡಿಲ ಲಾಕ್ ಆಗಿಹೋಗುತ್ತದೆ. ತೆರೆದು ಬಿಡುತ್ತದೆ. ನೆನಪು ಸಹ ಶಕ್ತಿಶಾಲಿಯಾಗಿರಬೇಕಾಗಿದೆ. ಸಾಧಾರಣ ನೆನಪಿದ್ದರೂ ಸಹ ಲಾಕ್ ಆಗುವುದಿಲ್ಲ. ಹಾಗಾದರೆ ಸದಾ ಚೆಕ್ ಮಾಡಿ - ನೆನಪಂತೂ ಇದೆ ಆದರೆ ಸಾಧಾರಣ ನೆನಪಿದೆಯೋ ಅಥವಾ ಶಕ್ತಿಶಾಲಿ ನೆನಪಿದೆಯೋ? ಇದೇ ರೀತಿ, ಸೇವೆ ಮಾಡುತ್ತೀರಿ ಆದರೆ ನಿಸ್ವಾರ್ಥ ಸೇವೆಯಿದೆಯೋ ಅಥವಾ ಯಾವುದಾದರೂ ಸ್ವಾರ್ಥ ತುಂಬಿದೆಯೋ? ಸೇವೆ ಮಾಡುತ್ತಿದ್ದರೂ. ಸ್ಮೃತಿಯಲ್ಲಿದ್ದರೂ ಒಂದು ವೇಳೆ ಮಾಯೆಬರುತ್ತದೆ ಎಂದರೆ ಅವಶ್ಯವಾಗಿ ಸೇವೆ ಅಥವಾ ನೆನಪಿನಲ್ಲಿ ಏನೋ ಕಡಿಮೆಯಿದೆ.

ಸದಾ ಖುಷಿಯ ಗೀತೆಯನ್ನು ಹಾಡುವಂತಹ ಶ್ರೇಷ್ಠ ಭಾಗ್ಯವಂತ ಅತ್ಮರಾಗಿದ್ದೀರಿ- ಇದೇ ಸ್ಮೃತಿಯಲ್ಲಿ ಮುಂದುವರೆಯಿರಿ. ಯಥಾರ್ಥ ಯೋಗ ಹಾಗೂ ಯಥಾರ್ಥ ಸೇವೆ - ಇದು ಚಿಹ್ನೆಯಾಗಿದೆ ನಿರ್ವಿಘ್ನವಾಗಿರುವುದು ಹಾಗೂ ನಿರ್ವಿಘ್ನರನ್ನಾಗಿ ಮಾಡುವುದು. ನಿರ್ವಿಘ್ನವಾಗಿದ್ದೀರಾ ಅಥವಾ ಆಗಾಗ ವಿಘ್ನ ಬಂದು ಬಿಡುತ್ತದೆಯೋ? ಕೆಲವೊಮ್ಮೆ ಪಾಸ್ ಆಗುತ್ತೀರಿ. ಇನ್ನು ಕೆಲವೊಮ್ಮೆ ಸ್ವಲ್ಪ ಫೇಲ್ ಆಗಿಬಿಡುತ್ತೀರಿ. ಯಾವುದೇ ಮಾತು ಬರುತ್ತದೆ ಎಂದರೆ, ಅದರಲ್ಲಿ ಒಂದುವೇಳೆ ಯಾವುದೇ ಪ್ರಕಾರದ ಸ್ವಲ್ಪವಾದರೂ  ಇದು ಏಕೆ. ಇದು ಏನು ಎಂಬ ಫೀಲಿಂಗ್ ಬರುತ್ತದೆ ಎಂದರೆ ವಿಘ್ನ ಬರುವುದು. ಸದಾ ಇದನ್ನೇ ಯೋಚಿಸಿ ವ್ಯರ್ಥ ಫೀಲಿಂಗ್ ಗಳಿಂದ ಭಿನ್ನ, ಫೀಲಿಂಗ್ ಪ್ರೂಫ್ ಆತ್ಮರಾಗಿರಿ. ಆಗ ಮಾಯಾಜೀತ್‌ರಾಗುವಿರಿ, ಅರ್ದದಿ ನೋಡಿ - ತಂದೆಯವರಾಗಿಬಿಟ್ಟರಿ, ತಂದೆಯವರಾಗುವುದು ಇದು ಎಷ್ಟು ಖುಷಿಯ ಮಾತಾಗಿದೆ' ಎಂದಿಗೂ ನನ್ನದಲ್ಲಿಯೂ ಯೋಚಿಸಿರಲಿಲ್ಲ ಭಗವಂತನ ಇಷ್ಟು ಸಮೀಪ ಸಂಬಂಧದಲ್ಲಿ ಬರುತ್ತೇವೆಯೆಂದು! ಆದರೆ ಸಾಕಾರದಲ್ಲಂತು ಆಗಿಬಿಟ್ಟರಿ! ಹಾಗಾದರೆ ಏನನ್ನು ನೆನಪಿಟ್ಟುಕೊಳ್ಳುತ್ತೀರಿ? ಸದಾ ಖುಷಿಯ ಗೀತೆಯನ್ನು ಹಾಡುವವರು. ಈ ಖುಷಿಯ ಗೀತೆ ಎಂದಿಗೂ ಸಮಾಪ್ತಿಯಾಗುವುದಿಲ್ಲ.

ಟೀಚರ್ಸ್‌ನ ಅರ್ಥವೇ ಆಗಿದೆ ತಮ್ಮ ಫೀಚರ್ಸ್ ನಿಂದ ಎಲ್ಲರಿಗೂ ಫರಿಸ್ತೆಯ ಅನುಭವ ಮಾಡಿಸುವವರು. ಇಂತಹ ಟೀಚರ್ಸ್‌ಗಳಾಗಿದ್ದೀರಲ್ಲವೇ? ಸಾಧಾರಣ ರೂಪ ಕಾಣಿಸದಿರಲಿ, ಫರಿಶ್ತೆಯ ರೂಪ ಕಾಣಿಸಲಿ ಏಕೆಂದರೆ ಟೀಚರ್ಸ್ ನಿಮಿತ್ತರಾಗಿದ್ದೀರಲ್ಲವೇ. ಹಾಗಾದರೆ ಯಾರು ನಿಮಿತ್ತರಾಗುತ್ತಾರೆಯೋ ಅವರು ಏನನ್ನು ಸ್ವಯಂ ಅನುಭವ ಮಾಡುತ್ತಾರೋ ಅದನ್ನೇ ಅನ್ಯರಿಗೂ ಅನುಭವ ಮಾಡಿಸುತ್ತಾರೆ. ನಿಮಿತ್ತರಾಗುವುದೂ ಸಹ ಭಾಗ್ಯವಾಗಿದೆ. ಈಗ ಇದೇ ಭಾಗ್ಯವನ್ನು ಸ್ವಯಂ ಅನುಭವದಲ್ಲಿ ವೃದ್ಧಿಗೊಳಿಸಿ ಹಾಗೂ ಅನ್ಯರಿಗೂ ಅನುಭವ ಮಾಡಿಸಿ. ಎಲ್ಲದಕ್ಕಿಂತ ವಿಶೇಷ ಮಾತು - ಅನುಭವೀ-ಮೂರ್ತರಾಗಿ.

ರಿವೈಸ್ ಕೋರ್ಸ್ 03-10-1992.

***ಬ್ರಾಹ್ಮಣರು ಎಂದರೆ ಸದಾ ಶ್ರೇಷ್ಠ ಭಾಗ್ಯದ ಅಧಿಕಾರಿ.***

ಬ್ರಾಹ್ಮಣ ಜನ್ಮ ಎಂಬುದು ಕಲ್ಪ ಪೂರ್ವದ ಭಾಗ್ಯಾನುಸಾರ ಲಭಿಸಿದೆ. ಬ್ರಾಹ್ಮಣ ಜನ್ಮವು ಸ್ವಯಂ ಭಗವಂತ ಅರ್ಥಾಥ್ ಅನಾದಿ ತಂದೆ ಮತ್ತು ಆದಿ ಬ್ರಹ್ಮಾ ತಂದೆಯ ಮೂಲಕ ಪ್ರಾಪ್ತಿಯಾಗುತ್ತದೆ. ಮೊದಲನೆಯ ಭಾಗ್ಯ- ಜನ್ಮವೇ ಭಾಗ್ಯವಿದಾತನ ಮುಖಾಂತರ ಆಗಿದೆ. ತಂದೆಯ ಮೂಲಕ ಆಸ್ತಿ ಮತ್ತು ಶ್ರೇಷ್ಠ ಪಾಲನೆಯು ಸಿಗುತ್ತದೆ. ಸ್ವಯಂ ಪರಮಾತ್ಮನೇ ಪಾಲನಾಕರ್ತರಾಗಿದ್ದಾರೆ ಎಂದು ಭಾಗ್ಯಶಾಲಿ ಆತ್ಮರಾದ ತಾವು ಅನುಭವ ಮಾಡುತ್ತೀರಿ.

ಎರಡನೇ ಭಾಗ್ಯ- ಶಿವಪರಮಾತ್ಮನೇ ಸತ್ಯ ಶಿಕ್ಷಕರಾಗಿದ್ದಾರೆ. ಸತ್ಯ ಶಿಕ್ಷಕನು ಜನ್ಮ ಪಡೆಯುತ್ತಿದ್ದಂತೆಯೇ ತ್ರಿಕಾಲದರ್ಶಿಯನ್ನಾಗಿ ಮಾಡಿ ಮೂರು ಕಾಲಗಳ ವಿದ್ಯೆಯನ್ನು ಎಷ್ಟು ಸಹಜ ವಿಧಿಯಿಂದ ಓದಿಸಿದರು ಎಷ್ಟು

ಶ್ರೇಷ್ಠವಿದ್ಯೆಯಾಗಿದೆ. ನಿರಾಶವಾದಿಗಳನ್ನು ಆಶಾವಾದಿಗಳನ್ನಾಗಿ ಮಾಡಿದರು. ಪರಮಾತ್ಮನ ವಿದ್ಯೆಯಿಂದ ಇಡೀ ವಿಶ್ವದಲ್ಲಿನ ಶ್ರೇಷ್ಠಾತಿ ಶ್ರೇಷ್ಠ ಪದವಿಯನ್ನು ಪಡೆಯುತ್ತಿದ್ದೀರಿ.

ಮೂರನೇ ಭಾಗ್ಯ - ಶಿವಪರಮಾತ್ಮನೇ ಸದ್ಗುರುವಾಗಿದ್ದಾರೆ. ಸದ್ಗುರುವಿನ ರೂಪದಲ್ಲಿ ಸದಾ ಯೋಗಿಯಾಗಿ ಸದಾ ಪವಿತ್ರರಾಗಿರಿ ಎಂಬ ಮಹಾಮಂತ್ರ ಹಾಗೂ ವರದಾನವನ್ನು ಕೊಟ್ಟಿದ್ದಾರೆ ಮತ್ತು ಸರ್ವ ಖಜಾನೆಗಳ ಅಧಿಕಾರದ ಪ್ರಾಪ್ತಿಯಾಗಿದೆ. ಸ್ವಯಂ ಭಗವಂತನೇ ತಂದೆ ಶಿಕ್ಷಕ ಮತ್ತು ಸದ್ಗುರುವಾಗಿದ್ದಾನೆ. ಭಾಗ್ಯಶಾಲಿಗಳು ಎಂದರೆ ಪರಿಶ್ರಮವನ್ನು ಸಮಾಪ್ತಿ ಮಾಡಿ ಪ್ರೀತಿಯಿಂದ ನಡೆಯುವವರು ಎಂದರ್ಥ. ಅಂದುಕೊಳ್ಳಲಿಲ್ಲ ಆದರೆ ಬಲಹೀನವಾಗಿ ಬಿಟ್ಟೆವು. ಎಂಬ ಭಾಷೆಯು ಭಾಗ್ಯಶಾಲಿ ಬ್ರಾಹ್ಮಣ ಆತ್ಮರದಲ್ಲ ಭಾಗ್ಯಶಾಲಿ ಆತ್ಮರು ಪ್ರೀತಿಯ ಉಯ್ಯಾಲೆಯಲ್ಲಿ ಮೋಜಿನಲ್ಲಿ ಹಾರುತ್ತಾರೆ. ಹಾರುವ ಕಲೆಯ ಮೋಜಿನಲ್ಲಿ ಇರುತ್ತಾರೆ. ಎಂದು ತಿಳಿಸುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನನಗೆ ಅನಾದಿ ಶಿವ ಪರಮಾತ್ಮ ಮತ್ತು ಆದಿ ಬ್ರಹ್ಮಾ ತಂದೆಯಿಂದ ಈ ಅಲೌಕಿಕ ಜನ್ಮ ಲಭಿಸಿದೆ, ಎಂಬ ಶ್ರೇಷ್ಠ ಭಾಗವನ್ನು ಸ್ಮೃತಿಯಲ್ಲಿಟ್ಟುಕೊಂಡು ಸದಾ ಹರ್ಷಿತವಾಗಿ ಇದ್ದೇನೆ.

2. ನನ್ನ ಚಲನೆ (ನಡವಳಿಕೆ) ಮತ್ತು ಚಹರೆಯಲ್ಲಿ ಸ್ಮೃತಿ ಸ್ವರೂಪ ಪ್ರತ್ಯಕ್ಷವಾಗಿ ಸ್ವಯಂ ಮತ್ತು ಇತರರಿಗೆ ಅನುಭವವಾಗಿದೆ.

3. ನಾನು ಸೇವೆಯನ್ನು ನಿರ್ವಿಘ್ನವಾಗಿ ವೃದ್ಧಿ ಮಾಡುತ್ತಾ ಸೇವೆಯೊಂದಿಗೆ ಸೇವಾ ಸಾಧನಗಳನ್ನು ಸಹಜವಾಗಿ ಸ್ವತಹವಾಗಿ ಹೆಚ್ಚು ಮಾಡಿಕೊಂಡಿದ್ದೇನೆ.

4. ಭಾಗ್ಯಶಾಲಿ ಆತ್ಮನಾದ ನನ್ನ ಪ್ರತಿಯೊಂದು ಹೆಜ್ಜೆಯನ್ನು ಪರಮಾತ್ಮನ ಪಾಲನೆ (ಪರಮಾತ್ಮನ ಶ್ರೀಮತ) ಯಿಂದ ಅನುಭವ ಮಾಡಿಕೊಂಡಿದ್ದೇನೆ.

5. ನಾನು ಜನ್ಮ ಪಡೆಯುತ್ತಿದ್ದಂತೆಯೇ ಬೇಹದ್ ಖಜಾನೆಗಳಿಂದ ಸಂಪನ್ನವಾಗಿ ಇರುತ್ತಾ ಅವಿನಾಶಿ ಖಜಾನೆಗಳಿಂದ ವಾರಸತ್ವದ ಅಧಿಕಾರಿಯಾಗಿ ಇದ್ದೇನೆ.

6. ನನಗೆ ಈ ಒಂದು ಜನ್ಮದಿಂದಲೇ ಜನ್ಮಜನ್ಮಗಳಿಗೆ ಶ್ರೇಷ್ಠ ಪದವಿಯನ್ನು ಪಡೆಯುತ್ತೇನೆ ಎಂದು ಪರಮಾತ್ಮ ಗ್ಯಾರಂಟಿ ಕೊಟ್ಟಿದ್ದಾರೆ.

7. ನನ್ನ ಚೈತನ್ಯ ದೇವಿ ದೇವತಾ ಸ್ವರೂಪದಿಂದ ಎಲ್ಲರೂ ಮಹಾನತೆಯನ್ನು ಮನಸ್ಸಿನಿಂದ ಅನುಭವ ಮಾಡಿಕೊಂಡು ನಮಸ್ಕರಿಸಿ, ನರ್ತಿಸಿದ್ದಾರೆ.

8. ನಾನು ಈಶ್ವರೀಯ ವಿದ್ಯೆಯನ್ನು ಅಭ್ಯಸಿಸಿ ಪದಮಾ ಪದಂ ಭಾಗ್ಯವನ್ನು ಪ್ರತ್ಯಕ್ಷ ರೂಪದಲ್ಲಿ ಅನುಭವ ಮಾಡಿಕೊಂಡಿದ್ದೇನೆ.

9. ನಾನು ಪರಿಶ್ರಮವನ್ನು ಸಮಾಪ್ತಿ ಮಾಡಿ ಪರಮಾತ್ಮನ ಪ್ರೀತಿಯ ಉಯ್ಯಾಲೆಯಲ್ಲಿ ತೂಗುತ್ತಾ ಹಾರುವ ಕಲೆಯ ಮೋಜಿನಲ್ಲಿ ಹಾರುತ್ತಾ ಇರುವ ಶ್ರೇಷ್ಠಭಾಗ್ಯವಾನ್ ಆತ್ಮ.

10. ನನಗೆ ಸರ್ವಖಜಾನೆಗಳ ಅನುಭೂತಿಯ ಕೀಲಿಕೈಯಾದ ಪವಿತ್ರ ಭವ! ಯೋಗಿಭವ! ಎಂಬ ಮಹಾಮಂತ್ರವನ್ನು ಸದ್ಗುರುವಾದ ಪರಮಾತ್ಮನಿಂದ ಶ್ರೇಷ್ಠ ಭಾಗ್ಯದ ರೂಪದಲ್ಲಿ ಜನ್ಮದಿಂದಲೇ ಲಭಿಸಿದೆ.

11. ನಾನು ಪರಮಾತ್ಮನಿಂದ ಲಭಿಸಿರುವ ವಾರಸತ್ವ, ವಿದ್ಯೆ, ಮಹಾಮಂತ್ರದ ಕೀಲಿ ಕೈ ಮತ್ತು ವರದಾನಗಳನ್ನು, ಖಜಾನೆಗಳನ್ನು ಈಗಲೇ ಸ್ವಯಂ ಅನುಭವ ಮಾಡಿಕೊಂಡು ಇತರರಿಗೆ ಅನುಭವ ಮಾಡಿಸಿ ಅಂತಿಮದಲ್ಲಿ ವಿಶ್ವದಲ್ಲಿ ಪ್ರತ್ಯಕ್ಷವಾಗಿದ್ದೇನೆ.

12. ನಾನು ಪರಮಾತ್ಮನ ತಂದೆಯ ಸಂಬಂಧದಲ್ಲಿ ಶ್ರೇಷ್ಠ ವಾರಸತ್ವ ಮತ್ತು ಪಾಲನೆಯನ್ನು ಪಡೆದು, ಸತ್ಯ ಶಿಕ್ಷಕನ ಸಂಬಂಧದಲ್ಲಿ ಶ್ರೇಷ್ಠ ವಿದ್ಯೆಯಿಂದ ಶ್ರೇಷ್ಠ ಪದವಿ ಮತ್ತು ಶ್ರೇಷ್ಠ ಸಂಪಾದನೆಯನ್ನು ಮಾಡಿಕೊಂಡು, ಸದ್ಗುರುವಿನ ಸಂಬಂಧದಿಂದ ಮಹಾಮಂತ್ರ ಮತ್ತು ಸರ್ವವರದಾನಗಳನ್ನು ಪಡೆದು ಪ್ರತಿಯೊಂದು ಹೆಜ್ಜೆಯಲ್ಲಿ ಪದಮಾ ಪದಮ್ ಜಮಾ ಮಾಡಿಕೊಂಡಿರುವ ಅತಿ ಶ್ರೇಷ್ಠ ಪದಮಾ ಪದಂ ಶ್ರೇಷ್ಠ ಭಾಗ್ಯವಾನ್ ಆತ್ಮನಾಗಿದ್ದೇನೆ.

13. ನಾನು ಪರಮಾತ್ಮನಿಂದ ಲಭಿಸಿರುವ ಖಜಾನೆ(ಗಣಿ)ಗಳನ್ನು ಕಾರ್ಯದಲ್ಲಿ ಉಪಯೋಗಿಸಿ ಮತ್ತಷ್ಟು ವೃದ್ಧಿ ಮಾಡಿಕೊಂಡು ಸ್ವಯಂ ಮತ್ತು ಇತರರಿಗೆ ಅನುಭವ ಮಾಡಿಸಿ ನಡವಳಿಕೆ ಮತ್ತು ಚಹರೆಯಲ್ಲಿ ಪ್ರತ್ಯಕ್ಷ ಮಾಡಿ ನಂಬರನ್ನು ತಯಾರು ಮಾಡಿಕೊಂಡಿದ್ದೇನೆ.